1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್ ಸಿ 238/2018

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಉಮಾಪತಿ ಭಟ್ | ಪ್ರಾಸಾ | 1 |
| ತಂದೆ ಹೆಸರು | ಃ | ಶ್ರೀಧರ ಭಟ್ | ಚಾಸಾ | 1 |
| ವಯಸ್ಸು | ಃ | 39 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕ ಃ 05.01.2022 | |
| ವೃತ್ತಿ | ಃ | ಪೌರೋಹಿತ್ಯ | | |
| ವಾಸ ಸ್ಥಳ | ಃ | ಜೆ ಪಿ ನಗರ , ಮೈಸೂರು | | |

**ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ**

1. ಚಾಸಾ 2 ರಿಂದ 4 ನನಗೆ ಪರಿಚಯವಿರುತ್ತಾರೆ. ಚಾಸಾ 5 ನನ್ನ ಹೆಂಡತಿಯ ತಮ್ಮ. ಚಾಸಾ 6 ನನ್ನ ಹೆಂಡತಿಯ ತಾಯಿ. ಚಾಸಾ 7 ನನ್ನ ಹೆಂಡತಿಯ ಅಕ್ಕ. ನಾನು ಕಳೆದ 15 ವರ್ಷಗಳಿಂದ ಪೌರೋಹಿತ್ಯ ಮಾಡಿಕೊಂಡಿದ್ದೇನೆ. ನಾನು ಮೈಸೂರು ಜೆ ಪಿ ನಗರದಲ್ಲಿ ವಾಸವಾಗಿದ್ದೇನೆ. ದಿಃ 05.07.2010 ರಂದು ನನ್ನ ಮದುವೆಯಾಗಿದೆ. ನನ್ನ ಹೆಂಡತಿ ಹೆಸರು ಆಶಾ. ನನಗೆ ಒಬ್ಬಳು ಹೆಣ್ಣು ಮಗಳಿದ್ದಾಳೆ. ಘಟನೆ ಆದಾಗ ಅವಳಿಗೆ 6 ವರ್ಷ ವಯಸ್ಸಾಗಿತ್ತು.

2. ದಿಃ 28.01.2018 ರಂದು ನಾನು ಜೆ ಪಿ ನಗರದಲ್ಲಿ ಪೌರೋಹಿತ್ಯ ಮಾಡಿಸಲು ಒಂದು ಮನೆಗೆ ಹೋಗಿದ್ದೆನು. ಸಂಜೆ 4 ಗಂಟೆಗೆ ಮನೆಗೆ ಬಂದೆನು. ಆಗ ನನ್ನ ಹೆಂಡತಿ ಹೊಟ್ಟೆನೋವು ಮತ್ತು ತಲೆ ನೋವು ಎಂದು ಮಲಗಿದ್ದಳು. ಆಗ ನಾನು ನನ್ನ ಮಗಳನ್ನು ಕರೆದುಕೊಂಡು ಮಾರ್ಕೆಟ್ ಗೆ ಹೋಗಿ ರಾತ್ರಿ 8 ಗಂಟೆಗೆ ಮರಳಿ ಬಂದೆನು. ಆಗಲೂ ನನ್ನ ಹೆಂಡತಿ ಮಲಗಿದ್ದಳು. ಕಾರಣ ನಾನು ಅಡಿಗೆ ಮಾಡಿ ಊಟ ಮಾಡಿ ರಾತ್ರಿ 9.30 ಗಂಟೆಗೆ ಮಲಗಿದೆವು. ಊಟ ಮಾಡಿದ 5 ನಿಮಿಷದ ನಂತರ ನನ್ನ ಹೆಂಡತಿಗೆ ವಾಂತಿ ಆಯಿತು. ರಾತ್ರಿ 10.30 ಗಂಟೆ ಸುಮಾರಿಗೆ ವಾಂತಿ ಮತ್ತು ಹೊಟ್ಟೆ ನೋವು ಜಾಸ್ತಿ ಆಯಿತು. ಕಾರಣ 11.30 ಗಂಟೆಗೆ ಕ್ಯಾಬ್ ಮಾಡಿಕೊಂಡು ವಿದ್ಯಾರಣ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಆಸ್ಪತ್ರೆಯಲ್ಲಿ ನನ್ನ ಹೆಂಡತಿಯನ್ನು ಅಡ್ಮಿಟ್ ಮಾಡಿಸಿಕೊಂಡರು. ರಾತ್ರಿ 1 ಗಂಟೆಗೆ ಸ್ಕ್ಯಾನಿಂಗ್ ಮಾಡಿಸಲು ತಿಳಿಸಿದ್ದರು. ಆದರೆ ಅಲ್ಲಿ ಸ್ಕ್ಯಾನಿಂಗ್ ಮಿಷನ್ ಇರಲಿಲ್ಲ. ಮರುದಿನ ಬೆಳಿಗ್ಗೆ 9.15 ಗಂಟೆಗೆ ನನ್ನ ಹೆಂಡತಿಗೆ ಹೊಟ್ಟೆನೋವು ತುಂಬಾ ಜಾಸ್ತಿ ಆಯಿತು. ಆಗ ಅವಳಿಗೆ ಲೋ

ಬಿಪಿ ಆಗಿದೆ ಅಂತ ವೈದ್ಯರು ತಿಳಿಸಿದರು. ನಂತರ ಬೆಳಿಗ್ಗೆ 10.30 ಗಂಟೆಗೆ ನನ್ನ ಹೆಂಡತಿ ಮೃತಪಟ್ಟಳು ಎಂದು ವೈದ್ಯರು ತಿಳಿಸಿದರು. ನಾನು ಈ ವಿಷಯವನ್ನು ನನ್ನ ಸಂಬಂದಿಕರಿಗೆ ತಿಳಿಸಿದೆನು. ವಿದ್ಯಾರಣ್ಯ ಆಸ್ಪತ್ರೆಯ ಶವಾಗಾರ ಇರದಿದ್ದ ಕಾರಣ ಮಧ್ಯಾಹ್ನ 3.15 ಗಂಟೆಗೆ ನನ್ನ ಹೆಂಡತಿಯ ಶವವನ್ನು ಬೃಂದಾವನ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಸಂಬಂದಿಕರೆಲ್ಲರೂ ಬರುವಷ್ಟರಲ್ಲಿ ಸಾಯಂಕಾಲ 6 ಗಂಟೆ ಆಗಿತ್ತು. ಕಾರಣ ಮರುದಿನ ಬೆಳಿಗ್ಗೆ 10.30 ಗಂಟೆಗೆ ಗೋಕುಲಂ ಸ್ಮಶಾಣದಲ್ಲಿ ನನ್ನ ಹೆಂಡತಿಯ ಶವಸಂಸ್ಕಾರ ಮಾಡಿದೆವು. ನಂತರ ನಾನು ಸ್ನೇಹಿತರ ಮನೆಗೆ ಹೋಗಿದ್ದು 2-3 ದಿನ ಮನೆಗೆ ಹೋಗಲಿಲ್ಲ.

3. ದಿಃ 02.02.2018 ರಂದು ಮನೆಗೆ ಬಂದು ಮನೆಯನ್ನು ಸ್ವಚ್ಛಗೊಳಿಸುತ್ತಿದ್ದಾಗ ಒಂದು ಡೆತ್ ನೋಟ್ ಸಿಕ್ಕಿತು. ಸದರಿ ಡೆತ್ ನೋಟ್ ಬಗ್ಗೆ ನಾನು ನನ್ನ ಹೆಂಡತಿಯ ಮನೆಯವರಿಗೆ ತಿಳಿಸಿದೆನು. ಸದರಿ ಡೆತ್ ನೋಟ್ ನಲ್ಲಿ ನನ್ನ ಹೆಂಡತಿ ಅವಳ ಸಾವಿಗೆ ಗಣೇಶ (ಗಣಪತಿ) ಕಾರಣ , ಆತನು ತನಗೆ ಲವ್ ಮಾಡು ಎಂದು ಬೆದರಿಕೆ ಹಾಕುತ್ತಿದ್ದನು ಎಂದು , ನೀನು ಲವ್ ಮಾಡದಿದ್ದರೆ ನಿನ್ನ ಗಂಡನನ್ನು ಮತ್ತು ಮಗಳನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದ ಕಾರಣ ಅವಳು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಬರೆದಿಟ್ಟಿದ್ದಳು. ಮುಂದುವರಿದು ನನ್ನ ಹೆಂಡತಿ ಈ ವಿಷಯವನ್ನು ಯಾರಿಗೂ ಹೇಳಿಕೊಳ್ಳಲಿಲ್ಲ , ನನ್ನ ಮಗಳನ್ನು ಸರಿಯಾಗಿ ನೋಡಿಕೊಳ್ಳಿ ಎಂದು ಬರೆದಿಟ್ಟಿದ್ದಳು. ನಂತರ ನಾನು ಮನೆಯಲ್ಲಿ ನನ್ನ ಹೆಂಡತಿ ಉಪಯೋಗಿಸುತ್ತಿದ್ದ ಮೊಬೈಲ್ ನ್ನು ಪರಿಶೀಲಿಸಿದಾಗ ಚಾಸಾ 4 ರಾಘವೇಂದ್ರ ಭಟ್ ರವರ ಮುಖಾಂತರ ಆರೋಪಿ ನನ್ನ ಹೆಂಡತಿಯ ಪರಿಚಯ ಆದ ಬಗ್ಗೆ ತಿಳಿಯಿತು.

4. ಡೆತ್ ನೋಟ್ ಬಗ್ಗೆ ನಾನು ಸಂಬಂದಿಕರಿಗೆ ತಿಳಿಸಿದಾಗ ಪೊಲೀಸರಿಗೆ ದೂರು ಕೊಡುವ ಬಗ್ಗೆ ನಿರ್ಧಾರ ಮಾಡಿ ದಿಃ 04.02.2018 ರಂದು ಸಂಜೆ 6 ಗಂಟೆಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆನು. ಸದರಿ ದೂರು ಈಗ ನೋಡುತ್ತಿದ್ದು ಅದರಲ್ಲಿ ನನ್ನ

ಸಹಿ ಇದೆ. ದೂರನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನನ್ನ ಹೆಂಡತಿಯ ಸಾವಿಗೆ ಗಣಪತಿ ಕಾರಣ ಎಂದು ದೂರು ನೀಡಿದೆನು.

5. ದೂರು ಕೊಟ್ಟ ನಂತರ ಪೊಲೀಸರು ನಮ್ಮ ಮನೆ ನಂ. ಇಡಬ್ಲೂಎಸ್ 12, 29 ನೇ ಮೇನ್ , 2 ನೇ ಹಂತ , ಜೆಪಿ ನಗರ , ಮೈಸೂರು ಗೆ ಬಂದಿದ್ದು ಅವರಿಗೆ ನಾನು ಮನೆಯನ್ನು ತೋರಿಸಿದ್ದು ಪೊಲೀಸರು ಮನೆ ಪರಿಶೀಲನೆ ಮಾಡಿ ಮಹಜರ್ ಮಾಡಿ ಡೆತ್ ನೋಟ್ ಹಾಗೂ ನನ್ನ ಹೆಂಡತಿ ಉಪಯೋಗಿಸುತ್ತಿದ್ದ ಬಿ ಎಸ್ ಎನ್ ಎಲ್ ಸಿಮ್ ಇರುವ ಸ್ಯಾಮ್ ಸಂಗ್ ಮೊಬೈಲ್ ನ್ನು ಅಮಾನತ್ತು ಪಡಿಸಿಕೊಂಡು ಮೊಬೈಲ್ ನ್ನು ಬಿಳಿ ಬಟ್ಟೆಯಿಂದ ಸುತ್ತಿ ಬಿ ಹೆಚ್ ಸಿ ಎಂಬ ಅಕ್ಷರನಿಂದ ಸೀಲ್ ಮಾಡಿ ನನ್ನ ಮತ್ತು ಸಾಕ್ಷಿದಾರರ ಸಹಿಗಳನ್ನು ಪಡೆದರು. ಆ ಸಮಯದಲ್ಲಿ ಸತೀಶ್ ಹೆಗಡೆ ಮತ್ತು ಪ್ರಸನ್ನ ಭಟ್ ರವರು ಹಾಜರಿದ್ದು ಸಾಕ್ಷಿ ಸಹಿ ಮಾಡಿದರು. ಮಹಜರ್ ನ್ನು ರಾತ್ರಿ 8 ಗಂಟೆಯಿಂದ 9 ಗಂಟೆವರೆಗೆ ಮಾಡಿದರು. ಸದರಿ ಮಹಜರ್ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಮಹಜರ್ ನ್ನು ನಿಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

6. ಈ ಹಂತದಲ್ಲಿ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 5/2018 ರಲ್ಲಿ ನಮೂದಿಸಿರುವ ಸೀಲಾದ ಐಟಂ ನಂ. 1 ಸೀಲಾದ ಕವರ್ ನ್ನು ಒಡೆದು ಅದರಲ್ಲಿರುವ ಡೆತ್ ನೋಟ್ ತೆಗೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿರುತ್ತಾರೆ. ಸದರಿ ಡೆತ್ ನೋಟ ಎರಡು ಹಾಳೆಗಳಲ್ಲಿ ಇದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

7. ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 5/2018 ರಲ್ಲಿ ನಮೂದಿಸಿರುವ ಸೀಲಾದ ಐಟಂ ನಂ. 2 ಸ್ಯಾಮ್ ಸಂಗ್ ಟಚ್ ಸ್ಕ್ರೀನ್ ಮೊಬೈಲನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

8. ನಂತರ ದಿಃ 09.02.2018 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸರು ನನ್ನ ಮನೆಗೆ ಬಂದು ನಾನು ತಂದು ಇಟ್ಟಿದ್ದ ನನ್ನ ಹೆಂಡತಿಯ ಮೂಳೆಗಳನ್ನು ಮಹಜರ್ ಮಾಡಿ ವಶಪಡಿಸಿಕೊಂಡರು. ಅವುಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಬಿ ಹೆಚ್ ಸಿ ಎಂದು ಸೀಲ್ ಮಾಡಿ ಅವುಗಳ ಮೇಲೆ ನನ್ನ ಸಹಿ ಪಡೆದುಕೊಂಡರು. ಮಹಜರ್ ಮಾಡಿದ ಸಮಯದಲ್ಲಿ ಸಾಕ್ಷಿದಾರರಾದ ಸತೀಶ ಮತ್ತು ಪ್ರಸನ್ನ ಭಟ್ ಹಾಜರಿದ್ದು ಮಹಜರ್ ಗೆ ಸಹಿ ಮಾಡಿದ್ದರು. ಈಗ ಸದರಿ ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಮಹಜರ್ ನ್ನು ನಿಪಿ 4 ಎಂದು ಸಾಕ್ಷಿದಾರರ ಸಹಿ ನಿಪಿ 4 ಎ ಎಂದು ಗುರುತಿಸಲಾಯಿತು. ಮಹಜರ್ ನ್ನು 11.00 ರಿಂದ 11.30 ಗಂಟೆವರೆಗೆ ಮಾಡಿದ್ದರು.

9. ದಿಃ 12.02.2018 ರಂದು ಪೊಲೀಸರು ಮಧ್ಯಾಹ್ನ 4 ಗಂಟೆಗೆ ಪುನಃ ನಮ್ಮ ಮನೆಗೆ ಬಂದು ನನ್ನ ಹೆಂಡತಿ ಬರೆದಂತಹ ಒಂದು ಹಳೆ ಡೈರಿಯನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡರು. ನನ್ನ ಹೆಂಡತಿ 2007 ರಲ್ಲಿ ಬರೆದಂತಹ ಡೈರಿಯನ್ನು ಪೊಲೀಸರು ಸಾಕ್ಷಿದಾರರಾದ ಸತೀಶ ಮತ್ತು ಪ್ರಸನ್ನ ರವರ ಸಮಕ್ಷಮ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡರು. ಸದರಿ ಮಹಜರ್ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಹಿ ಇದೆ. ಮಹಜರ್ ನ್ನು ನಿಪಿ 5 ಎಂದು ಸಾಕ್ಷಿದಾರರ ಸಹಿ ನಿಪಿ 5 ಎ ಎಂದು ಗುರುತಿಸಲಾಯಿತು.

10. ಈ ಹಂತದಲ್ಲಿ ಪಿಪಿ ಯವರ ವಿನಂತಿ ಮೇರೆಗೆ ಪಿಎಫ್ ಸಂಖ್ಯೆ 10/2018 ರಲ್ಲಿ ನಮೂದಿಸಿರುವ ಸೀಲಾದ ಐಟಂ ನಂ. 1 ನ್ನು ಒಡೆದು ಅದರಲ್ಲಿರುವ ಡೈರಿಯನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿರುತ್ತಾರೆ. ಸದರಿ ಡೈರಿಯನ್ನು ನಿಪಿ 6 ಎಂದು ಗುರುತಿಸಲಾಯಿತು.

11. ದಿಃ 06.05.2018 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಮರುಹೇಳಿಕೆಯನ್ನು ಪಡೆದುಕೊಂಡರು.

(ಈ ಹಂತಿದಲ್ಲಿ ಪಿಪಿ ರವರ ವಿನಂತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ನನ್ನ ಉ ಮೇ ತ ನ್ಯಾ ಬೆ ಮಾಡಲಾಯಿತು)

**ಓ ಹೇ ಕೇ ಸ ಇ ಎ**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು